ಶ್ರೀ ದಿನೇಶ್ ಗುಂಡೂರಾವ್ : ಹಾಗಾದರೆ ನೀವು ಅದನ್ನು ತೆಗೆದುಕೊಂಡು ಬನ್ನಿ. ನಾವು ನಿಮಗೆ ಸಹಾಯವನ್ನು ಮಾಡುತ್ತೇನೆ.'

ಅಧ್ಯಕ್ಷರು : ಶ್ರೀ ದಿನಕರ್ ಶೆಟ್ಟಿಯವರೆ ತಾವು ಗಮನವನ್ನು ಸೆಳೆಯಿರಿ.

Sri Katta Subramanya Naidu : I appreciate your reference. You are good MLA. Our Opposition Leader is a good visionary. No problem.

ಶ್ರೀ ಸಿದ್ದರಾಮಯ್ಯ : ನೀವು ಕುಳಿತುಕೊಂಡು ಮಾತನಾಡುತ್ತಿದ್ದೀರಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : No Sir, you are good visionary ಎಂದು ಹೇಳಿದೆ.

ಅಧ್ಯಕ್ಷರು : ನಾನು ದಿನಕರಶೆಟ್ಟಿಯವರ ಹೆಸರನ್ನು ಕರೆದಿದ್ದೇನೆ.

Sri Siddaramaiah : O.K. Thank you for your complement. ಬೆಂಗಳೂರು ನಗರದ ಜನರು ಇನ್ನು 10 ರಿಂದ 20 ವರ್ಷದಲ್ಲಿ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ. ಈಗಾಗಲೇ you are facing the problems. ಮತ್ತೆ ಅದು aggravate ಆಗಬಾರದು. ಅದು aggravate ಆಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ you must come out with an action plan and White paper on the floor of the house.

ಅಧ್ಯಕ್ಷರು : ಈಗ ಗಮನಸೆಳೆಯುವ ಸೂಚನೆ, ದಿನಕರ ಶೆಟ್ಟಿಯವರ ಹೆಸರನ್ನು ಕರೆದಿದ್ದೇನೆ.

ಆ) ಗೋವಾ ಮಹಾರಾಷ್ಟ್ರ ರಾಜ್ಯಗಳಲ್ಲಿ ಇತ್ತೀಚೆಗೆ ಬೀಸಿದ ಪಿಯಾನ್ ಚಂಡಮಾರುತದಲ್ಲಿ ಕುಮುಟಾ ಹಾಗೂ ಭಟ್ಕಳ ತಾಲ್ಲೂಕಿನಲ್ಲಿ ಸಾವಿಗೆ ಈಡಾದ ಹಲವಾರು ಮೀನುಗಾರರ ಕುಟುಂಬದವರಿಗೆ ಪರಿಹಾರ ವಿತರಣೆಯಾಗದಿರುವ ಬಗ್ಗೆ–

\- - - - -

ಶ್ರೀ ದಿನಕರ ಕೆ. ಶೆಟ್ಟಿ : ಗೋವಾ ಮಹಾರಾಷ್ಟ್ರ ರಾಜ್ಯಗಳಲ್ಲಿ ಇತ್ತೀಚೆಗೆ ಬೀಸಿದ ಪಿಯಾನ್ ಚಂಡಮಾರುತದಲ್ಲಿ ಕುಮುಟಾ ಹಾಗೂ ಭಟ್ಕಳ ತಾಲ್ಲೂಕಿನಲ್ಲಿ ಸಾವಿಗೆ ಈಡಾದ ಹಲವಾರು ಮೀನುಗಾರರ ಕುಟುಂಬದವರಿಗೆ ಪರಿಹಾರ ವಿತರಣೆಯಾಗದಿರುವ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

ಮಹಾರಾಷ್ಟ್ರ ಕಡಲ ತೀರದಲ್ಲಿ ಕಾಣಿಸಿಕೊಂಡ ಫಿಯಾನ ಚಂಡಮಾರುತದಲ್ಲಿ ಕುಮಟಾ ತಾಲ್ಲೂಕಿನ 9 ಮತ್ತು ಅಂಕೋಲಾ ತಾಲ್ಲೂಕಿನ ಒಬ್ಬ ಮೀನುಗಾರರು ಕಾಣೆಯಾಗಿದ್ದು, ಎರಡು ಮೃತ ದೇಹಗಳು ಸಿಕ್ಕಿದ್ದು, ಈಶ್ವರ ಪಾಂಡು ಅಂಬಿಗ ಮತ್ತು ರತ್ನಾಕರ ಏಗಪ್ಪ ತಾಂಡೇಲ ಇವರ ವಾರಸುದಾರರಿಗೆ ಮಹಾರಾಷ್ಟ್ರ ಸರ್ಕಾರದವರು ನೀಡಿದ ತಲಾ ರೂ. 1.00 ಲಕ್ಷ ಪರಿಹಾರವನ್ನು ನೀಡಲಾಗಿದೆ. ಕಾಣೆಯಾದ ಉಳಿದ ಮೀನುಗಾರರ ವಾರಸುದಾರರಿಗೆ ಪರಿಹಾರ ನೀಡಲು ಮುಖ್ಯ ಕಾರ್ಯದರ್ಶಿ, ಮಹಾರಾಷ್ಟ್ರ ಸರ್ಕಾರ, ಮುಂಬೈ, ಇವರಿಗೆ ದಿನಾಂಕ: 14.12.2009 ರಂದು ಪತ್ರ ಬರೆಯಲಾಗಿದೆ.

ಗೋವಾ ಕಡಲ ತೀರದಲ್ಲಿ ಕಾಣೆಯಾಗಿರುವ ಹೊನ್ನಾವರ ತಾಲ್ಲೂಕಿನ 19 ಮೀನುಗಾರರು ಹಾಗೂ ಅಂಕೋಲಾ ತಾಲ್ಲೂಕಿನ ಒಬ್ಬ ಮೀನುಗಾರರ ವಾರಸುದಾರರಿಗೆ ಪರಿಹಾರ ಧನ ಬಟವಡೆ ಮಾಡಲು ಮುಖ್ಯ ಕಾರ್ಯದರ್ಶಿ, ಗೋವಾ ಸರ್ಕಾರ, ಪಣಜಿ, ಇವರಿಗೆ ದಿನಾಂಕ: 14.12.2009 ರಂದು ಪತ್ರ ಬರೆಯಲಾಗಿದೆ.

ಶ್ರೀ ಆನಂದ ಅಸ್ನೋಟಿಕರ್ (ಮೀನುಗಾರಿಕಾ ಸಚಿವರು) (ಸಹಕಾರ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ದಿನಾಂಕ: 11.12.2009ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಗಿರುವಂತಹ ಅನಾಹುತದಿಂದ ಅರಬ್ಬಿ ಸಮುದ್ರ ಬೀಸಿದ ಪಿಯಾನ್ ಚಂಡಮಾರುತದಲ್ಲಿ ಗೋವಾ ರಾಜ್ಯದಲ್ಲಿ ಮೀನುಗಾರರು ಮಹಾರಾಷ್ಟ್ರ ರಾಜ್ಯದಲ್ಲಿ ಮೃತಪಟ್ಟಿರುವಂತಹ ಮೀನುಗಾರರ ವರದಿ ನಮ್ಮ ಇಲಾಖೆಯ ಬರೆದಿರುವಂತಹ ವರದಿ ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಕುಮುಟಾ ತಾಲ್ಲೂಕಿನಲ್ಲಿ ಸುಮಾರು 9 ಮೀನುಗಾರರ ಕಾಣೆಯಾಗಿದ್ದಾರೆಂದು ತಿಳಿದು ಬಂದಿದೆ. ಅದರಲ್ಲಿ 7 ಜನರು ಮೃತಪಟ್ಟಿದ್ದಾರೆ. ಆ ಮೃತದೇಹಗಳು ಪತ್ತೆಯಾಗಿದೆ. ಅದರಲ್ಲಿ ಇಬ್ಬರ ಮೃತದೇಹಗಳು ಪ್ತತೆಯಾಗಿರುವುದಿಲ್ಲ. ಈ ಎಲ್ಲಾ 9 ಜನ ವಾರಸುದಾರರಿಗೆ ಗೋವಾ ಸರ್ಕಾರವು ತಲಾ 50ಸಾವಿರ ರೂ.ಗಳಂತೆ ಪರಿಹಾರವನ್ನು ದೊರಕಿಸಿಕೊಟ್ಟಿದೆ. ಕರ್ನಾಟಕ ಸರ್ಕಾರವು ಒಬ್ಬ ಫಲಾನುಭವಿಯ ಸರಿಯಾದ ವರದಿಯನ್ನು ನೀಡದಿರುವಂತಹ ಸಂದರ್ಭದಲ್ಲಿಯೂ ಅವರಿಗೆ ತಲಾ 1 ಲಕ್ಷ ರೂಪಾಯಿಗಳ ಪರಿಹಾರದ ಹಣವನ್ನು ನೀಡಿದೆ. ಇದರ ಜೊತೆಗೆ ಹೊನ್ನಾವರ ತಾಲ್ಲೂಕಿನಲ್ಲಿ ಸುಮಾರು 19 ಜನ ಮೀನುಗಾರರು ಗೋವಾ ರಾಜ್ಯದಲ್ಲಿ ಮೀನುಗಾರಿಕೆಗೆ ಹೋದಾಗ ನಾಪತ್ತೆಯಾಗಿದ್ದಾರೆ.

ಅವರಲ್ಲಿ ಇಬ್ಬರ ಮೃತದೇಹವು ಸಿಕ್ಕಿದೆ. ಮಿಕ್ಕಿದವರು ಇನ್ನು ನಾಪತ್ತೆಯಾಗಿದ್ದಾರೆ. ಆ ಕುಟುಂಬದವರಿಗೆ ಗೋವಾ ರಾಜ್ಯದವರು 50 ಸಾವಿರ ರೂಪಾಯಿಗಳ ಪರಿಹಾರವನ್ನು ನೀಡಿದೆ. ಭಟ್ಕಳ್ ತಾಲ್ಲೂಕಿನಲ್ಲಿ ಮೀನುಗಾರರು ನಾಪತ್ತೆಯಾಗಿರುವ ಬಗ್ಗೆ ವರದಿಯು ಇದುವರೆಗೂ ಆಗಿರುವುದಿಲ್ಲ. ನಮ್ಮ ಇಲಾಖೆಯಿಂದ ಮಹರಾಷ್ಟ್ರ ಮತ್ತು ಗೋವಾ ರಾಜ್ಯದಿಂದ ಒಂದು ವರದಿಯನ್ನು ನಾವು ಒಂದು ಸಮೀಕ್ಷೆಗಾಗಿ ತರಿಸುತ್ತಿದ್ದೇವೆ. ಶೀಘ್ರವೆ ನಮ್ಮ ಇಲಾಖೆಯಲ್ಲಿರುವಂತಹ ಸಂಕಷ್ಟ ಪರಿಹಾರ ಯೋಜನೆಯಲ್ಲಿ ತಲಾ 50 ಸಾವಿರ ರೂಪಾಯಿಗಳನ್ನು ಪ್ರತಿಯೊಬ್ಬ ಮೀನುಗಾರರಿಗೆ ನೀಡುವ ಬಗ್ಗೆ ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡಿದ್ದೇವೆ.

ಶ್ರೀ ದಿನಕರ ಕೆ. ಶೆಟ್ಟಿ : ಕರಾವಳಿ ಪ್ರದೇಶದಿಂದ ಪ್ರತಿ ವರ್ಷ ತಮ್ಮ ಕುಟುಂಬದ ನಿರ್ವಹಣೆಗಾಗಿ ಸಮೀಪದ ರಾಜ್ಯವಾದಂತಹ ಗೋವಾ ಮತ್ತು ಮಹಾರಾಷ್ಟ್ರ ಮತ್ತು ನೆರೆ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಗೆ ಈ ಮೀನುಗಾರರು ವಲಸೆ ಹೋಗುವಂತಹದ್ದು, ಅಲ್ಲಿಗೆ ಹೋದಂತಹ ಸುಮಾರು 28 ಜನರು ಸತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಏನಾದರೂ Clarification ಇದ್ದರೆ ಅದನ್ನು ಕೇಳಿ.

ಶ್ರೀ ದಿನಕರ ಕೆ.ಶೆಟ್ಟಿ : ಸುಮಾರು 28 ಜನರು ಸತ್ತಿದ್ದಾರೆ. ಆ 28 ಜನ ಕುಟುಂಬದವರ ನಿರ್ವಹಣೆ ಹೇಗಾಗಬೇಕು? ಅವರ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆ 28 ಜನರ ಕುಟುಂಬವು ನಿರ್ಗತಿಕ ಕುಟುಂಬವಾಗಿದೆ. ಅವರಿಗೆ ನಮ್ಮ ಕರ್ನಾಟಕ ಸರ್ಕಾರವು ಏನು ಪರಿಹಾರವನ್ನು ನೀಡದೆ ಇದ್ದರೆ ಹೇಗೆ? ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ನಾವು ಹೇಳಬೇಕಾಗಿದೆ. ನಮ್ಮ ಜಿಲ್ಲೆಯು ಬಹಳ ಅಲಕ್ಷ್ಯ ಜಿಲ್ಲೆಯಾಗಿದೆ. ಇವತ್ತು ಬಜೆಟ್‌ನಲ್ಲಿ ಕೂಡ ನಮ್ಮ ಜಿಲ್ಲೆಗೆ ಯಾವುದೇ ಅವಕಾಶವಿಲ್ಲ. ಅದರಲ್ಲಿಯೂ ಸಹ 28 ಜನರು ಸತ್ತಿದ್ದಾರೆ. ಇವರ ಬಗ್ಗೆ ಸರ್ಕಾರದವರು ....

ಅಧ್ಯಕ್ಷರು : ಹೀಗಾದರೆ ಇದು ಈಗ ಮುಗಿಯುವುದಿಲ್ಲ. ಮಾನ್ಯ ಸಚಿವರೆ ತಾವು ಉತ್ತರವನ್ನು ಹೇಳಿ.

ಶ್ರೀ ದಿನಕರ ಕೆ. ಶೆಟ್ಟಿ : ಒಟ್ಟು 28 ಜನರು ಸತ್ತಿದ್ದಾರೆ. ಇವತ್ತು ಅವರ ಕುಟುಂಬಗಳಿಗೆ 50 ಸಾವಿರ ರೂಪಾಯಿಗಳನ್ನು ಗೋವಾ ಸರ್ಕಾರವು

ಇವತ್ತಿನವರೆಗೆ ಕೊಟ್ಟಿರುವುದಿಲ್ಲ. ನಮ್ಮ ಸರ್ಕಾರವು 1 ರೂಪಾಯಿಯನ್ನು ಸಹ ಕೊಟ್ಟಿಲ್ಲ.

ಅಧ್ಯಕ್ಷರು : ಅವರು ಉತ್ತರವನ್ನು ಹೇಳಲಿ. ತಾವು ಕೇಳಿರುವುದನ್ನೆ ಮತ್ತೆ ಕೇಳಿದರೆ ಹೇಗೆ? ನೀವು ಮತ್ತೆ ಮತ್ತೆ ಅದನ್ನೇ ಕೇಳುತ್ತಿದ್ದೀರಿ.

ಶ್ರೀ ದಿನಕರ ಕೆ. ಶೆಟ್ಟಿ : ಈ ವರದಿಯು ತಪ್ಪಿದೆ. ಮೃತ ಪಟ್ಟಿರುವ 28 ಕುಟುಂಬದವರ ಬಗ್ಗೆ ನಾವು ಏನು ಮಾಡಬೇಕು ಹೇಳಿ. ಅವರಿಗೆ ಇದುವರೆಗೂ ಏನು ಪರಿಹಾರವು ಸಿಕ್ಕಿರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಎಲ್ಲರೂ ನಿಂತುಕೊಂಡು ಕೇಳಿದರೆ ಅದು ಆಗುವುದಿಲ್ಲ. ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಕರಡಿ ಸಂಗಣ್ಣ : ಕೊಪ್ಪಳ ಜಿಲ್ಲೆ ಹಾಗೂ ತಾಲ್ಲೂಕಿನಲ್ಲಿ.....

ಅಧ್ಯಕ್ಷರು : ಕೊಪ್ಪಳ ತಾಲ್ಲೂಕಿಗೂ ಇದಕ್ಕೂ ಸಂಬಂಧವಿಲ್ಲ. ತಾವು ಬೇರೆ ರೂಪದಲ್ಲಿ ತನ್ನಿ.

ಶ್ರೀ ಕರಡಿ ಸಂಗಣ್ಣ : ಅಲ್ಲ ಬೇರೆ ತನ್ನಿ ಅಂದರೆ, ನಾನು ಮಂತ್ರಿಯವರ ಹತ್ತಿರ.....

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಯಲ್ಲಿ ಈ ರೀತಿಯಾಗಿ ಮಾಡಿದರೆ ಕಷ್ಟವಾಗುತ್ತದೆ. ತಾವು ಹಿರಿಯ ಸದಸ್ಯರಾಗಿದ್ದೀರಿ.

ಶ್ರೀ ದಿನಕರ ಕೆ. ಶೆಟ್ಟಿ : ಆ ಮೀನುಗಾರರ ಕುಟುಂಬಕ್ಕೆ ಪರಿಹಾರವೆ ಸಿಕ್ಕಿರುವುದಿಲ್ಲ.

ಅಧ್ಯಕ್ಷರು : ಶ್ರೀ ದಿನಕರ ಕೆ. ಶೆಟ್ಟಿಯವರೊಬ್ಬರೆ ಸಹಿಯನ್ನು ಮಾಡಿರುವುದು ಬೇರೆಯವರಿಗೆ ಅವಕಾಶವಿಲ್ಲ.

ಶ್ರೀ ಕರಡಿ ಸಂಗಣ್ಣ : ಸಹಿಯನ್ನು ಮಾಡಿರುವವರಿಗೆ ಮಾತ್ರ ಎಂದು ಹೇಳುತ್ತಿದೀರಿ. ಎಲ್ಲರಿಗೂ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಅದರಲ್ಲಿ ಎಲ್ಲರೂ ಕೇಳುವುದಕ್ಕಾಗುವುದಿಲ್ಲ.

ಶ್ರೀ ಕರಡಿ ಸಂಗಣ್ಣ : ಈಗ ಬೆಂಗಳೂರಿನ ಎಲ್ಲಾ ಶಾಸಕರು ಮಾತನಾಡಿದರು.

ಅಧ್ಯಕ್ಷರು : ಏಕೆ? ಅವರೆಲ್ಲರೂ ಕೂಡ ಸಹಿಯನ್ನು ಮಾಡಿದ್ದಾರೆ. Please ಕುಳಿತುಕೊಳ್ಳಿ.

ಶ್ರೀ ಕರಡಿ ಸಂಗಣ್ಣ : ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಕುಳಿತುಕೊಳ್ಳದಿದ್ದರೆ, ನಾನು ಇದನ್ನು close ಮಾಡುತ್ತೇನೆ.

ಶ್ರೀ ದಿನಕರ ಕೆ. ಶೆಟ್ಟಿ : ಯಾವುದರಲ್ಲೂ ನಮ್ಮ ಜಿಲ್ಲೆಗೆ ಏನು ಲಾಭವಾಗುತ್ತಿಲ್ಲ.

ಅಧ್ಯಕ್ಷರು : ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ದಿನಕರ ಕೆ. ಶೆಟ್ಟಿ : 28 ಜನರು ಸತ್ತಿದ್ದಾರೆ. 28 ಜನ ಕುಟುಂಬದವರ ಬಗ್ಗೆ ನಾವು ಯೋಚನೆಯನ್ನು ಮಾಡಬೇಕು. ನಮ್ಮ ಕರ್ನಾಟಕ ಸರ್ಕಾರದ ವತಿಯಿಂದ ಏನಾದರೂ ಪರಿಹಾರವನ್ನು ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಆನಂದ ಅಸ್ನೋಟಿಕರ್ : ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ಪ್ರತಿಯೊಂದು ಫಲಾನುಭವಿಗಳಿಗೆ 50 ಸಾವಿರ ರೂಪಾಯಿಗಳ ಧನಸಹಾಯವನ್ನು ನಾವು ಶೀಘ್ರವೆ ಮಹಾರಾಷ್ಟ್ರ ಮತ್ತು ಗೋವಾ ಸರ್ಕಾರದಿಂದ ವರದಿಯ ಬಂದ ಮೇಲೆ ಶೀಘ್ರವೇ ಅವರಿಗೆ ಪರಿಹಾರವನ್ನು ನೀಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಆಯಿತು. ಮಾನ್ಯ ರಮಾನಾಥ್‌ರೈರವರ ಹೆಸರನ್ನು ಕರೆದಿದ್ದೇನೆ.

ಇ) ಪಶ್ಚಿಮವಾಹಿನಿ ಯೋಜನೆ ಅನುಷ್ಠಾನ ಆಗದಿರುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಪಶ್ಚಿಮವಾಹಿನಿ ಯೋಜನೆ ಅನುಷ್ಠಾನ ಆಗದಿರುವ ಬಗ್ಗೆ ಸಣ್ಣ ನೀರಾವರಿ, ಯೋಜನೆ, ಮತ್ತು ಸಾಂಖ್ಯಿಕ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) : ಮಾನ್ಯ ಅಧ್ಯಕ್ಷರೆ,

ಮಾನ್ಯ ಅಧ್ಯಕ್ಷರೆ :

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ನೀರನ್ನು ಕೃಷಿ ಹಾಗೂ ಕುಡಿಯುವ ನೀರಿಗಾಗಿ ಬಳಸಿಕೊಳ್ಳುವ ಸಲುವಾಗಿ ಸಣ್ಣ ನೀರಾವರಿ ಇಲಾಖೆಯಿಂದ ಈ ನದಿಗಳಿಗೆ ಕಿಂಡಿ ಅಣೆಕಟ್ಟುಗಳನ್ನು